# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರು ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ವಾರ್ಡಿನಲ್ಲಿ ದಿನಾಂಕ: 07-12-2020 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21 / 21-09-2020 ರ ಆದೇಶದಂತೆ ದಿನಾಂಕ: 21-09-2020 ರವರ ಆದೇಶದಂತೆ ದಿನಾಂಕ: 07-12-2020 ರಂದು ವಾರ್ಡ್ ಸಂಖ್ಯೆ: 89-ರ ಜೋಗುಪಾಳ್ಯ ವಾರ್ಡಿನ ಸೋಮೇಶ್ವರಪುರ ವೆಲ್‌ಫೇರ್ ಅಸೋಸಿಯೇಷನ್, 5ನೇ ಅಡ್ಡರಸ್ತೆ, ಸೋಮೇಶ್ವರಪುರ ಹಲಸೂರು, ಬೆಂಗಳೂರು-560008 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು,

ಮಾನ್ಯ ಶ್ರೀ.ಎನ್.ಎ.ಹ್ಯಾರಿಸ್ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಸಭೆಯು ದಿನಾಂಕ: 07-12-2020 ರಂದು ನಡೆಯಿತು.

### ಸಭೆಗೆ ಹಾಜರಿದ್ದವರ ವಿವರಗಳು

1) ಮಾನ್ಯ ಶ್ರೀ.ಎನ್.ಎ ಹ್ಯಾರಿಸ್, ಶಾಸಕರು, ಶಾಂತಿನಗರ ವಿಧಾನ ಸಭಾ ಕ್ಷೇತ್ರ , ಅಧ್ಯಕ್ಷರು
2) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ,ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ)
3) ಕಾರ್ಯಪಾಲಕ ಅಭಿಯಂತರರು (ಶಾಂತಿನಗರ), ಸಹಾಯಕ ಕಂದಾಯ ಅಧಿಕಾರಿ (ದೊಮ್ಮಲೂರು) ರವರು ಮತ್ತು ಸಹಾಯಕ ಅಭಿಯಂತರರು , ಬಿಬಿಎಂಪಿ ಇತರ ವಿಭಾಗಗಳ ಅಂದರೆ, ಅರಣ್ಯ ಆರೋಗ್ಯ, ಕಾಮಗಾರಿ, ವಿದ್ಯುತ್, ಘನತಾಜ್ಯ ವಿಭಾಗ, ಅಧಿಕಾರಿಗಳು, ಮತ್ತು BWSSB ಬೆಸ್ಕಾಂ, ಸಂಚಾರಿ/ಅರಕ್ಷಕರ ಠಾಣೆ, ಸಬ್ ಇನ್ಸ್ ಪೆಕ್ಟರ್ ಮತ್ತು ಸಿಬ್ಬಂದಿ ಇಲಾಖೆಯ ಅಧಿಕಾರಿಗಳು ಹಾಜರಿದ್ದರು
4) ವಾರ್ಡ್ ಸಮಿತಿ ಸದಸ್ಯರು,
   1) ಶ್ರೀಮತಿ. ಆಶಾ ಆಲ್ವಿನ್
   2) ಶ್ರೀಮತಿ. ಗಾಯತ್ರಿ,
   3) ಶ್ರೀ, ರಮೇಶ್ ರೆಡ್ಡಿ,
   4) ಶ್ರೀ. ಹೇಮಂತ್ ನಾಗಾ
   5) ಶ್ರೀ. ಶ್ರೀನಿವಾಸ ನಾಯ್ಡು ರವರು ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಶಾಸಕರಿಗೆ ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಮತ್ತು ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ ದಿನಾಂಕ: 24-11-2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಯನ್ನು ನೋಡೆಲ್ ಅಧಿಕಾರಿಯವರು ಸಂಕ್ಷಿಪ್ತವಾಗಿ ಒದುತ್ತಾ .ಒಂದೊಂದು ವಿಷಯವನ್ನು ಹಾಗೂ ಅದರ ಕ್ರಮ ತೆಗೆದುಕೊಂಡಿರುವ ಬಗ್ಗೆ ಚರ್ಚಿಸಲಾಯಿತು.

## ಇಂದಿನ ಸಭೆಯಲ್ಲಿ ಚರ್ಚಿಸಿದಂತಹ ಪ್ರಮುಖ ವಿಷಯಗಳ ಬಗ್ಗೆ

1) 10ನೇ ಮುಖ್ಯರಸ್ತೆಯಲ್ಲಿ ರಸ್ತೆ ಕಾಮಗಾರಿ ಕೆಲಸ ತುರ್ತಾಗಿ ಪೂರ್ಣಗೊಳಿಸಲು ಶ್ರೀ. ವಿಜಯ್‌ರವರು ಕೋರಿದರು.

2) ಜೋಗುಪಾಳ್ಯ ಮುಖ್ಯರಸ್ತೆಯಲ್ಲಿರುವ ಗಣೇಶ ಗುಡಿ ಸುತ್ತ ಮುತ್ತ ರಸ್ತೆಗಳಲ್ಲಿ ಇರುವ ದಬ್ರಿಸ್‌ಗಳನ್ನು ತೆಗೆದು ರಸ್ತೆಗಳನ್ನು ಸ್ವಚ್ಛವಾಗಿ ಇಡಲು ಸೂಚಿಸಿದರು.

4) ಸಾಯಿ ದೇವಸ್ಥಾನ ಹಾಗೂ ಗಣೇಶ ಗುಡಿ ಹತ್ತಿರ ಪಾಲಿಕೆಯ ಆಸ್ತಿಯಲ್ಲಿ ಅನಧಿಕೃತವಾಗಿ scrap ಬಳಕೆಗಾಗಿ ಅನಧಿಕೃತ ವ್ಯಕ್ತಿಗಳು ಅವರಿಸಿಕೊಂಡಿರುವುದನ್ನು ತೆರವುಗೊಳಿಸಿ ಪಾಲಿಕೆ ಆಸ್ತಿಯನ್ನು ಸಂಕ್ಷಿಸಿಕೊಳ್ಳಲು ಕೋರಲಾಯಿತು.

5) ಹಲಸೂರು ರೆಫೆರೆಲ್ ಆಸ್ಪತ್ರೆಯಲ್ಲಿ ಮೇಲ್ಛಾವಣಿಯಿಂದ ನೀರು ಸೋರಿಕೆ ಯಾಗಿದ್ದು, ಆಗಾಗ ವಿದ್ಯುತ್ ಕಡಿತ ಮತ್ತು ಕುಡಿಯುವ ನೀರು ತೊಂದರೆಯಾಗಿತ್ತಿದೆ ಎಂದು ಇದರ ಬಗ್ಗೆ ಸರಿಪಡಿಸಲು ಕೋರಿದರು.

6) ಶ್ರೀಮತಿ. ಆಶಾ ಅಲ್ವಿನ್ ರವರು ಸಿಸಿಟಿವಿ ಅವಳಡಿಕೆ ಇನ್ನೂ ಅಗಿಲ್ಲವೆಂದು ಮತ್ತು ಕುಡಿಯುವ ನೀರು ಸರಿಯಾಗಿ ಪೂರೈಕೆ ಆಗುತ್ತಿಲ್ಲವೆಂದು ಮಾನ್ಯ ಶಾಸಕರಿಗೆ ತಿಳಿಸಿದರು.

7) ಶ್ರೀ. ಕುಮಾರ್ ರವರು ಮನೆ ಮನೆಗೆ ಕುಡಿಯುವ ನೀರಿನ ಅಳವಡಿಕೆ ಆಗಿಲ್ಲವೆಂದು ಸಬೆಯಲ್ಲಿ ಚರ್ಚಿಸಲಾಯಿತು. ಸದರಿ ವಿಷಯ ದ ಬಗ್ಗೆ ಮಾನ್ಯ ಶಾಸಕರು ಸಂಬಂಧ ಪಟ್ಟ ಅಧಿಕಾರಿ ರವರಿಗೆ ಕ್ರಮ ವಹಿಸಲು ಸೂಚಿಸಿದರು.ಆಗಾಗೀ ಸಭೆಯಲ್ಲಿ ಹಾಜರಿದ್ದಂತಹ AEE, BWSSB ರವರು ಮಾತನಾಡಿ ಸದರಿ ಮನೆಗಳಿಗೆ ನೀರಿನ ಮೀಟರ್‌ಗಳು ಅಳವಡಿಕೆ ಆಗಿದೇ ಇರುವುದರಿಂದ ನೀರಿನ ಪೂರೈಕೆ ಆಗಿರುವುದಿಲ್ಲವೆಂದು ತಿಳಿಸಿದರು. ಆದ್ದರಿಂದ ಮಾನ್ಯ ಶಾಸಕರು, ಎಲ್ಲಾ ಮನೆಗಳಿಗೆ ನೀರಿನ ಮೀಟರ್‌ಗಳನ್ನು ಅಳವಡಿಸಿ ನೀರು ಪೂರೈಸಲು AEE, BWSSB ರವರಿಗೆ ಸೂಚಿಸಲಾಯಿತು.

8) ಪೌರಕಾರ್ಮಿಕರಿಗೆ ವಿಶ್ರಾಂತಿ ಕೊಠಡಿ ಮತ್ತು ಶೌಚಾಲಯವನ್ನು ನಿರ್ಮಿಸಿಕೊಡಲು ಪಾಲಿಕೆಯಲ್ಲಿ ಪ್ರತ್ಯೇಕ ಅನುದಾನವನ್ನು ಮೀಸಲಟ್ಟಿರುವುದರಿಂದ ಇದರ ಸದುಪಯೋಗ ಪಡೆದು ಕೊಳ್ಳಲು ಕ್ಷೇತ್ರದ ಪ್ರತಿ ವಾಡ್‌ನಲ್ಲಿ ಸ್ಥಳ ಗುರುತಿಸಿ ಕೊಡಲು ಮಾನ್ಯ ಶಾಸಕರು AEE, AE ರವರಿಗೆ ಸೂಚಿಸಿಲಾಯಿತು.

9) ಜೋಗುಪಾಳ್ಯ ವಾರ್ಡ್‌ನಲ್ಲಿ ಎಲ್ಲಿ ಎಲ್ಲಿ ಬೋರ್ ವೇಲ್‌ಗಳ ಕಾರ್ಯ ವೈಖರಿಗಳ ಬಗ್ಗೆ ಪರಿಶೀಲಿಸಿ ಹಾಗೂ ವಾರ್ಡ್‌ನಲ್ಲಿ ಬೋರ್ ವೇಲ್ ಅವಶ್ಯಕತೆ ಸ್ಥಳಗಳನ್ನು ಗುರುತಿಸಿ ವರದಿ ಸಲ್ಲಿಸಲು ಸಂಬಂದ ಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

10) ಮಾನ್ಯ ಶಾಸಕರು ಮಾತನಾಡುತ್ತಾ ವಾರ್ಡಿನಲ್ಲಿ ಸಾರ್ವಜನಿಕ ಶೌಚಾಲಯ ಬೇಕಾಗಿರುವ ಸ್ಥಳವನ್ನು ಗುರುತಿಸಿ ಹಾಗೂ ದುರಸ್ತಿ ಮತ್ತು ಹೊಸದಾಗಿ ಪುಟ್ ಬಾತ್ ಬೇಕಾಗಿರುವ, ವಾರ್ಡ್‌ನ ಸಮಿತಿ ಸದಸ್ಯರು ಮತ್ತು ಸಾರ್ವಜನಿಕರು ಗುರುತಿಸಿ ವರದಿಯನ್ನು ನೀಡಲು ಸೂಚಿಸಿದರು.

**ಮುಂದುವರೆದು ಮೊದಲನೇಯದಾಗಿ,** 10ನೇ ಮುಖ್ಯರಸ್ತೆಯಲ್ಲಿ ರಸ್ತೆ ದುರಸ್ಥಿ ಹಾಗೂ ಒಳಚರಂಡಿ ಕಾಮಗಾರಿಯು ವಿಳಂಬವಾಗಿದ್ದು, ಪ್ರತಿ ಮನೆಗೆ ಒಳಚರಂಡಿ ವ್ಯವಸ್ಥೆ ಮತ್ತು ರಸ್ತೆ ಕಾಮಗಾರಿ ಕೆಲಸ ಪೂರ್ಣಗೊಳದೇ ಇರುವ ಬಗ್ಗೆ ಮತ್ತೊಮ್ಮೆ ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸಲಾಯಿತು. ಈ ಬಗ್ಗೆ BWSSB ಅಧಿಕಾರಿಯವರಾದ ಶ್ರೀ. ಕೇಶವ ಹೆಗಡೆ ರವರು ಉತ್ತರಿಸುತ್ತಾ ಒಂದು ಬಂಡೆ ಬಂದಿರುವ ಕಾರಣದಿಂದ ತಡವಾಗಿರುತ್ತದೆ ಇನ್ನೂ ಒಂದು ವಾರದಲ್ಲಿ ಕೆಲಸವನ್ನು ಪೂರ್ಣಗೊಳಿಸುವುದಾಗಿ ತಿಳಿಸಿರುತ್ತಾರೆ.

ಅದನಂತರ BWSSB ರವರ ಕೆಲಸ ಪೂರ್ಣಗೊಂಡ ತಕ್ಷಣ 10ನೇ ಮುಖ್ಯರಸ್ತೆಗೆ ಡಾಂಬರಿಕರಣ ಮಾಡಲಾಗುವುದು. ಎಂದು ತಿಳಿಸಿರುತ್ತಾರೆ. ಮಾನ್ಯ ಶಾಸಕರು ಅಧಿಕಾರಿಗಳಿಗೆ ಶ್ರೀಘ್ರವಾಗಿ ಕೆಲಸವನ್ನು ಪೂರ್ಣಗೊಳಿಸಬೇಕೆಂದು ಎಚ್ಚರಿಸಿದರು.

**ಎರಡನೇಯದಾಗಿ,** ಮರಗಳ ಟ್ರಿಮಿಂಗ್ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ, ಅರಣ್ಯ ವಿಭಾಗದ ಶ್ರೀ. ದೇವರಾಜ್ ರವರು ಮರಗಳ ಟ್ರಿಮಿಂಗ್ ಕೆಲಸ ಪೂರ್ಣಗೊಂಡಿದೆ ಎಂದು ಸಭೆಯಲ್ಲಿ ತಿಳಿಸಿದರು.

**ಮೂರನೇಯದಾಗಿ,** ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯ ಮೈಧಾನದಲ್ಲಿ ಬೀದಿ ದೀಪ ಅಳವಡಿಸುವ ಹಾಗೂ ಶಾಲೆಯ ಆವರಣವನ್ನು ಸ್ವಚ್ಛ ಗೊಳಿಸುವ ಬಗ್ಗೆ ಚರ್ಚಿಸಲಾಗಿ, ಮಾನ್ಯ ಶಾಸಕರು ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ಕ್ರಮ ವಹಿಸಲು ಸೂಚಿಸಲಾಯಿತು.

ಸದರಿ ವಿಷಯದ ಬಗ್ಗೆ ಮಾನ್ಯ ಶಾಸಕರು, AE ಮಂಜಪ್ಪ ರವರಿಗೆ ಶಾಲೆ ಮೈಧಾನದಲ್ಲಿ ಬೀದಿ ದೀಪ ಅಳವಡಿಸಲು ಸೂಚಿಸಲಾಯಿತು.

**ನಾಲ್ಕನೇಯದಾಗಿ** ಶಾಲೆಯ ಸುತ್ತ ಮುತ್ತಲು, ಆಟದ ಮೈದಾನ, ಹಾಗೂ ಜೋಗುಪಾಳ್ಯ ಸುತ್ತ ಮುತ್ತಲು ರಸ್ತೆಗಳಲ್ಲಿ CCTV ಯನ್ನು ಅಳವಡಿಸಲು ಚರ್ಚಿಸಲಾಗಿ, ಸದರಿ ವಿಷಯದ ಬಗ್ಗೆ ಸಂಬಂಧ ಅಧಿಕಾರಿಗಳಿಗೆ ಕ್ರಮ ವಹಿಸಲು ಸೂಚಿಸಲಾಯಿತು. ಮತ್ತು ಬಾಲಕಿಯರ ಪ್ರೌಢಶಾಲೆಯ ಮೈಧಾನದಲ್ಲಿ ಇನ್ನಿತರ ಚಟುವಟಿಕೆ ನಡೆಯುತ್ತಿರುವ ಕಾರಣ ಆರಕ್ಷಕ ಸಿಬ್ಬಂದಿ ರವರಿಗೆ ಗಸ್ತು ತಿರುಗಲು ಸೂಚಿಸಿದರು.

**ಐದನೇಯದಾಗಿ** ಇಲ್ಪೆತೋಪ್ಪು ರಸ್ತೆಯಲ್ಲಿ RO ಪ್ಲಾಂಟ್ ಮೋರಿಯ ಮೇಲೆ ಕಟ್ಟಲಾಗಿ ಅದು ಇನ್ನು ಪ್ರಾರಂಭಿಸದ ಕಾರಣ ಮಾನ್ಯ ಶಾಸಕರು ಪ್ರಸ್ತುತ ಮೋರಿಯು ಚಾಲ್ತಿಯಲ್ಲಿ ಇರುವುದೇ ಇಲ್ಲವೋ ಹಾಗೂ ಕಟ್ಟಡವನ್ನು ಮೋರಿಯ ಮೇಲೆ ಕಟ್ಟಡಲಾಗಿದೆಯೇ: ಮೋರಿಯ ಸ್ಥಿತಿ ಗತಿಯ ವರದಿಯನ್ನು BWSSB ಹಾಗೂ ಕಾಮಗಾರಿ ಇಲಾಖೆಯು ಒಂದು ವಾರದೊಳಗೆ ವರದಿ ನೀಡಲು ಸೂಚಿಸಲಾಯಿತು.

11) ಆರಕ್ಷಕ ಠಾಣಾ ಸಿಬ್ಬಂದಿರವರಿಗೆ ವಾರ್ಡ್‌ನಲ್ಲಿ ರಾತ್ರಿ ಗಸ್ತು ಹೆಚ್ಚಿಸಲು ಸೂಚಿಸಲಾಯಿತು.

12) ನಂದನವನಂ ಎ.ಬಿ.ಸಿ ರಸ್ತೆಗಳನ್ನು ಡಾಂಬರೀಕರಣ ಮಾಡುವ ಬಗ್ಗೆ ಚರ್ಚಿಸಲಾಗಿ ಅತಿಶ್ರೀಘದಲ್ಲಿಯೇ ಕಾಮಗಾರಿ ಪ್ರಾರಂಭಿಸಲು ಅಧಿಕಾರಿಗಳಿಗೆ ಮಾನ್ಯ ಶಾಸಕರಿಗೆ ಸೂಚಿಸಿದರು.

13) Peace ಕಮಿಟಿಯ ವಿಷಯದ ಬಗ್ಗೆ ಚರ್ಚಿಸಲಾಯಿತು. ಸದರಿ ವಿಷಯದ ಬಗ್ಗೆ ಮಾನ್ಯ ಶಾಸಕರು Peace ಕಮಿಟಿಯಲ್ಲಿ ಯಾರ ಯಾರ ಹೆಸರು ಸೇರ್ಪಡೆಯಾಗಿದೆ ಅವರೆಲ್ಲರೂ Peace ಕಮಿಟಿ ಸಭೆಗೆ ಸರಿಯಾಗಿ ಹಾಜರಾಗುತ್ತಿದಾರೇಯೇ ಅಥವಾ ಸರಿಯಾಗಿ ಹಾಜರಾಗದೇ ಇದ್ದಲ್ಲಿ ಅಂತಹ ಸದಸ್ಯರನ್ನು ತೆಗೆದು ಹೊಸದಾಗಿ Peace ಕಮಿಟಿಯನ್ನು ಪುನರ್ ರಚಿಸಲು ಅರಕ್ಷಕ ಠಾಣೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಮಾನ್ಯ ಶಾಸಕರು ಸೂಚಿಸಿದರು.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಆಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಮಾನ್ಯ ಶಾಸಕರು ಸೂಚಿಸಿ. ಸಭೆಯನ್ನು ಮುಕ್ತಾಯಗೊಳಿಸಿದರು.

**ನೋಡೆಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ-89- ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು,</u>

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ